814 ಶ್ರೀ ರುದ್ರೇಶ್ ಗೌಡ ವೈ.ಎನ್. (ಬೇಲೂರು): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಪಡಿತರ ಚೀಟಿ ಹೊಂದಿಲ್ಲದ ಕುಟುಂಬಗಳು ಬಾಕಿ ಉಳಿದಿರುವುದೆಷ್ಟು;

ಆ) ಹಾಗಿದ್ದಲ್ಲಿ, ಅರ್ಹ ಫಲಾನುಭವಿಗಳು ಅರ್ಜಿ ಹಾಕಿದ್ದಲ್ಲಿ ಪಡಿತರ ಚೀಟಿ ವಿತರಣೆ ಮಾಡಲಾಗುವುದೇ;

ಇ) ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಯನ್ನು ವಿತರಣೆ ಮಾಡುವುದಾದರೆ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್. ಹಾಲಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಮಾಹಿತಿ ಇಲ್ಲ. ಆದರೆ ಯಾವುದೇ ಕುಟುಂಬ ಹೊಸ ಪಡಿತರ ಚೀಟಿಗಾಗಿ (ಎಪಿಎಲ್) ಅರ್ಜಿ ಸಲ್ಲಿಸಿದ್ದಲ್ಲಿ ಪರಿಶೀಲನೆ ನಂತರ ಎಪಿಎಲ್ ಪಡಿತರ ಚೀಟಿ ನೀಡಲಾಗುವುದು.

ಆ) ಪ್ರಸ್ತುತ ಎಪಿಎಲ್ ಪಡಿತರ ಚೀಟಿಯನ್ನು ಮಾತ್ರ ವಿತರಿಸಲಾಗುತ್ತಿದೆ.

ಇ) ರಾಜ್ಯದಲ್ಲಿ ಈಗಾಗಲೇ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅರ್ಹತೆಗೆ ತಕ್ಕಂತೆ ವರ್ಗವಾರು ಪಡಿತರ ಚೀಟಿಗಳನ್ನು ನೀಡಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ಕೊಡುವಲ್ಲಿ ಕೆಲವು ಅರ್ಹ ಕುಟುಂಬಗಳು ಕೈಬಿಟ್ಟು ಹೋಗಿವೆ ಎಂಬ ದೂರಿನನ್ವಯ ಡಿಸೆಂಬರ್ 2008 ರಿಂದ ಫೆಬ್ರವರಿ 2009ರವರೆಗೆ ನೆಮ್ಮದಿ ಕೇಂದ್ರದ ಮೂಲಕ 2844361 ಬಿಪಿಎಲ್ ತಾತ್ಕಾಲಿಕ ಕಾರ್ಡುಗಳನ್ನು ನೀಡಲಾಗಿರುತ್ತದೆ. ಈ ಪಡಿತರ ಚೀಟಿಗಳ ಪರಿಶೀಲನೆ ಪೂರ್ಣಗೊಂಡ

ನಂತರ ಸರ್ಕಾರವು ಕೈಬಿಟ್ಟು ಹೋದ ಅರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ಗುರುತಿಸಿ ಪಡಿತರ ಚೀಟಿ ನೀಡುವ ಬಗ್ಗೆ ಪರಿಗಣಿಸಲಾಗುವುದು.

816 ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿದಾರರ ಒಟ್ಟು ಸಂಖ್ಯೆ ಎಷ್ಟು;

ಆ) ಬಿಪಿಎಲ್ ಪಡಿತರ ಚೀಟಿದಾರರಿಗೆ ಕನಿಷ್ಟ 10 ಕೆಜಿಯಂತೆ ಆಹಾರ ಧಾನ್ಯ ಹಾಗೂ ಸೀಮೆಎಣ್ಣೆಯನ್ನು ವಿತರಿಸುತ್ತಿರುವಂತೆ ಎಪಿಎಲ್ ಕಾರ್ಡ್‌ದಾರರಿಗೂ ನೀಡಲಾಗುವುದೇ;

ಇ) ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿನ ಬಡ ಪಡಿತರ ಚೀಟಿದಾರರಿಗೆ ಇರುವ ಸೌಲಭ್ಯಗಳೇನು; ಮಾಹಿತಿ ನೀಡುವುದು?

ಶ್ರೀ ಹೆಚ್. ಹಾಲಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಎಪಿಎಲ್ – 1,06,68,594

ಬಿಪಿಎಲ್ – 52,97,772

ಒಟ್ಟು – 1,59,66,366

ಆ) ಈಗಾಗಲೇ ಪ್ರತಿ ಎಎವೈ ಪಡಿತರ ಚೀಟಿಗೆ 29 ಕೆಜಿ ಅಕ್ಕಿ, 6 ಕೆಜಿ ಗೋಧಿ ನೀಡಲಾಗುತ್ತಿದೆ. ಪ್ರತಿ ಅಕ್ಷಯ ಪಡಿತರ ಚೀಟಿದಾರರಿಗೆ ಯೂನಿಟ್ ಆಧಾರದ ಮೇಲೆ ಒಂದು ಯೂನಿಟ್‌ಗೆ 4 ಕೆಜಿ ಅಕ್ಕಿ ಗರಿಷ್ಟ 20 ಕೆಜಿ ಮತ್ತು 1 ಕೆಜಿ ಗೋಧಿ ಗರಿಷ್ಟ 3 ಕೆಜಿ ಮತ್ತು 1 ಕೆಜಿ ಸಕ್ಕರೆಯನ್ನು ನೀಡಲಾಗುತ್ತಿದೆ.